ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಖರೀದಿಸಿರುವ ಬಸ್ಸುಗಳು

202. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ ಮತ್ತು ಸಾರಿಗೆ ರಾಜ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೭ ರಿಂದ ೮೯ರವರೆಗೆ ಎಷ್ಟು ಬಸ್ಸು ಛಾಸಿಗಳನ್ನು ಖರೀದಿಸಿದೆ ?

ಆ) ಮೇಲ್ಕಂಡ ಛಾಸಿಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು ?

ಇ) ಛಾಸಿ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳು ನಿಜವೇ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ೧೯೮೭ ರಿಂದ ೮೯ರವರೆಗೆ ಛಾಸಿಗಳನ್ನು ಖರೀದಿಸಿದ ವಿವರ ಈ ಕೆಳಕಂಡಂತೆ ಇದೆ :

	ಲೇಲ್ಯಾಂಡ್	ಟಾಟಾ	ಒಟ್ಟು
೧೯೮೭–೮೮ರಲ್ಲಿ	೫೭೭	೬೬೩	೧೨೪೦
೧೯೮೮–೮೯ರಲ್ಲಿ	೫೫೫	೬೩೨	೧೧೮೭

ಆ) ೧೯೮೭–೮೮ರಲ್ಲಿ ೨೭.೯೧ ಕೋಟಿ ರೂ.ಗಳು
೧೯೮೮–೮೯ರಲ್ಲಿ ೨೯.೮೮ ಕೋಟಿ ರೂ.ಗಳು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಮಂಗಳಬಾಗಿಲಿನಿಂದ ಬೈಯ್ಯಪ್ಪಲ್ಲಿ ಮತ್ತು ತಿಮ್ಮರಾಜಪಲ್ಲಿ ಗ್ರಾಮಗಳಿಗೆ ಹೆಚ್ಚಿನ ಸಾರಿಗೆ ಸೌಕರ್ಯ

203. ಶ್ರೀ ಎಂ. ವಿ. ವೆಂಕಟಪ್ಪ (ಮಂಗಳಬಾಗಿಲು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳಬಾಗಿಲು ಟೌನ್‌ನಿಂದ ಬೈಯ್ಯಪ್ಪಲ್ಲಿ ಮತ್ತು ತಮ್ಮ ರಾಜಪಲ್ಲಿಗೆ ದಿನವೂ ಬಸ್ಸುಗಳ ಟಾಪ್‌ನಲ್ಲಿ ಪ್ರಯಾಣಿಕರು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮೇಲ್ಕಂಡ ಮಾರ್ಗಗಳಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಬಸ್ಸಿನ ಸೌಕರ್ಯವನ್ನು ಏರ್ಪಾಡು ಮಾಡಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಸಾರಿಗೆ ಆವಶ್ಯಕತೆಯ ಬೇಡಿಕೆ ಬಗ್ಗೆ ಸರ್ವೆ ಮಾಡಲು ಸಾರಿಗೆ ಇಲಾಖೆಯು ಕ್ರಮ ತೆಗೆದುಕೊಂಡಿದೆ. ಎಲ್ಲಿ ಸ್ಟೇಜ್ ಕ್ಯಾರೇಜ್ ಸೇವೆಯ ಅವಶ್ಯಕತೆ ಇದೆಯೋ ಅಲ್ಲಿ ಬಸ್ ಮಾಲೀಕರಿಗೆ ಪರವಾನಿಗೆಯನ್ನು ಕೊಡಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.